# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆ: 508/2025

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಮಂಜುನಾಥ | ಡಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | – | ಹನುಮಂತಪ್ಪ | |
| ವಯಸ್ಸು | – | ಸು. 37 ವರ್ಷ | ಪ್ರ.ವ.ಬೋ<br>ದಿನಾಂಕ: 24.12.2025 |
| ಉದ್ಯೋಗ | – | ಬಾರ್ ಬೆಂಡಿಂಗ್ ಕೆಲಸ (ಕಟ್ಟಡಕ್ಕೆ ಕಬ್ಬಿಣ ಕಟ್ಟುವ ಕೆಲಸ) | |
| ವಾಸ | – | ಹಿರಿಯೂರು ನಗರ | |

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ ಡಿ.ಜಿ. ವಕೀಲರಿಂದ:–**

1. ತಿಪ್ಪೇಸ್ವಾಮಿ ಎನ್ನುವವರು ನನ್ನ ಮೇಲೆ ಚೆಕ್ ಕೇಸ್ ಹಾಕಿರುತ್ತಾರೆ. ಸದರಿ ತಿಪ್ಪೇಸ್ವಾಮಿ ಹಾಗೂ ನನ್ನ ನಡುವೆ ಯಾವುದೇ ರೀತಿಯ ವ್ಯವಹಾರ ನಡೆದಿಲ್ಲ. ನನ್ನ ವಿರುದ್ಧ ಸುಳ್ಳು ಆರೋಪ ಮಾಡಿರುತ್ತಾರೆ. ನನಗೆ ನೋಟೀಸ್ ಬಂದಿತ್ತು ನನಗೆ ಅದನ್ನು ಓದಲು ಬರದೇ ಇರುವುದರಿಂದ ನಾನು ಅದನ್ನು ನಮ್ಮ ವಕೀಲರಿಗೆ ನೀಡಿದ್ದೆ. ಸದರಿ ನೋಟೀಸ್‌ಗೆ ನಾನು ತಿಪ್ಪೇಸ್ವಾಮಿಯವರಿಗೆ ನಿಪಿ-6 ರಂತೆ ಪ್ರತ್ಯುತ್ತರ ನೀಡಿರುತ್ತೇನೆ. ನನಗೆ ಈ ಪ್ರಕರಣದ ಪಿರ್ಯಾದಿ ತಿಪ್ಪೇಸ್ವಾಮಿ ಪರಿಚಯ ಇರುವುದಿಲ್ಲ. ನಾನು ಪಿರ್ಯಾದಿಗೆ ಯಾವುದೇ ಚೆಕ್ ನೀಡಿರುವುದಿಲ್ಲ. ನನ್ನ ಮತ್ತು ಪಿರ್ಯಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ.

**ಮುಂದುವರಿದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.